ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, Pp 25-32
©IIMRD, Mysuru
IIMRD JOURNALS
www.iimrd.com

# ಉಪ್ಪಿನ ಸತ್ಯಾಗ್ರಹದಲ್ಲಿ ಉಪ್ಪಾರರು

**ಡಾ. ಎಸ್.ಆರ್.ಅಂಜನಪ್ಪ[1]**

[1]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ. ದಾವಣಗೆರೆ

## ಸಾರಾಂಶ (Abstract)

*ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜದಲ್ಲಿ ಉಪ್ಪು ಮತ್ತು ತಾಯಿಗೆ ವಿಶೇಷ ಸ್ಥಾನವನ್ನು ಕಲ್ಪಿಸಲಾಗಿದೆ. ಹಾಗಾಗಿಯೇ 'ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ' ಎಂಬ ನಾಣ್ಣುಡಿ ಪ್ರಸಿದ್ಧವಾಗಿದೆ. ಚರಿತ್ರೆಯಲ್ಲಿ ಉಪ್ಪು ಅನೇಕ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಗಾಂಧೀಜಿಯ ಹೋರಾಟಕ್ಕೆ ಚರಕ ಹೇಗೆ ಅಸ್ತ್ರವಾಯಿತೋ ಹಾಗೆ ದಂಡಿಗೆ ಉಪ್ಪು ಮಾಡಲು ಹೋಗುವ ಗಾಂಧೀಜಿಯ ಪಯಣವೂ ಸ್ವಾತಂತ್ರ್ಯ ಹೋರಾಟದ ಯಾತ್ರೆಯಾಯಿತು. ಈ ಮೂಲಕ ಉಪ್ಪು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯಾಗಿದೆ. ಇಂತಹ ಚಾರಿತ್ರಿಕ ಮಹತ್ವ ಪಡೆದ ಉಪ್ಪಿನ ತಯಾರಕರೇ ಉಪ್ಪಾರರು.*

**ಮುಖ್ಯಪದಗಳು (Keywords):** ಉಪ್ಪಿನ ಸತ್ಯಾಗ್ರಹ, ಧರ್ಮ, ಮಹಾತ್ಮ ಗಾಂಧೀಜಿ, ಏಕಸ್ವಾಮ್ಯ, ದಂಡಿಯಾತ್ರೆ.

## ಪೀಠಿಕೆ

ಮಾನವನ ನಾಗರಿಕತೆಯ ಪ್ರಾರಂಭದಲ್ಲಿಯೇ ಬಳಕೆಗೆ ಬಂದ ಉಪ್ಪು ಬರೀ ಅಡುಗೆ ರುಚಿಯ ವಸ್ತುವಾಗಿ ಉಳಿದಿಲ್ಲ. ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜದಲ್ಲಿ ಉಪ್ಪು ಮತ್ತು ತಾಯಿಗೆ ವಿಶೇಷ ಸ್ಥಾನವನ್ನು ಕಲ್ಪಿಸಲಾಗಿದೆ. ಹಾಗಾಗಿಯೇ 'ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ' ಎಂಬ ನಾಣ್ಣುಡಿ ಪ್ರಸಿದ್ಧವಾಗಿದೆ. ಚರಿತ್ರೆಯಲ್ಲಿ ಉಪ್ಪು ಅನೇಕ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಆ ಮೂಲಕ ಚಾರಿತ್ರಿಕ ಮನ್ನಣೆಗೆ ಪಾತ್ರವಾಗಿದೆ. ಗಾಂಧೀಜಿಯ ಹೋರಾಟಕ್ಕೆ ಚರಕ ಹೇಗೆ ಅಸ್ತ್ರವಾಯಿತೋ ಹಾಗೆ ದಂಡಿಗೆ ಉಪ್ಪು ಮಾಡಲು ಹೋಗುವ ಗಾಂಧೀಜಿಯ ಪಯಣವೂ ಸ್ವಾತಂತ್ರ್ಯ ಹೋರಾಟದ ಯಾತ್ರೆಯಾಯಿತು. ಈ ಮೂಲಕ ಉಪ್ಪು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯಾಗಿದೆ. ಇಂತಹ ಚಾರಿತ್ರಿಕ ಮಹತ್ವ ಪಡೆದ ಉಪ್ಪಿನ ತಯಾರಕರೇ ಉಪ್ಪಾರರು.

*Please cite this article as: ಅಂಜನಪ್ಪ ಎಸ್.ಆರ್. (2021). ಉಪ್ಪಿನ ಸತ್ಯಾಗ್ರಹದಲ್ಲಿ ಉಪ್ಪಾರರು. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 25–32*

ಇಂದು ಭಾರತದಲ್ಲಿರುವ ಅಸಂಖ್ಯಾತ ಜಾತಿ, ಜನಾಂಗಗಳಲ್ಲಿ ಉಪ್ಪಾರ ಜಾತಿಯು ಒಂದಾಗಿದೆ. ಉಪ್ಪು ತಯಾರಿಕೆ ಇವರ ಪ್ರಮುಖ ವೃತ್ತಿಯಾಗಿತ್ತು. 'ಅವರ ಹೆಸರೇ ಹೇಳುವಂತೆ ಅವರ ಮೂಲ ಉದ್ಯೋಗ ಉಪ್ಪನ್ನು–ಮುಖ್ಯವಾಗಿ ನೆಲದ ಮಣ್ಣಿನಿಂದ ಉಪ್ಪನ್ನು ತಯಾರಿಸುವುದಾಗಿತ್ತು.' ಹೀಗೆ ಮಣ್ಣಿನಿಂದ ಉಪ್ಪನ್ನು ತಯಾರಿಸಿದ ಇವರು ನಿಜವಾಗಿ ಮಣ್ಣಿನ ಮಕ್ಕಳಾಗಿದ್ದರು. ಮಣ್ಣಿನಿಂದ ಇಟ್ಟಿಗೆ ನಿರ್ಮಿಸಿದವರು, ಕೆರೆ, ಕಾಲುವೆ, ಬಾವಿ ತೋಡಿದವರು. ಮಣ್ಣಿನ ಮೂಲಕ ನಾಗರೀಕತೆಯ ಬೆಳವಣಿಗೆಗೆ ಕಾರಣರಾದವರೇ ಉಪ್ಪಾರರು.

ಹೀಗೆ ಜಗತ್ತಿನ ನಾಗರೀಕತೆಯ ಬೆಳವಣಿಗೆಗೆ ಕಾರಣರಾದ, ಭಾರತೀಯ ಸಮಾಜ ಸಂಸ್ಕೃತಿಗೆ ಅಪಾರ ಕಾಣಿಕೆಯನ್ನಿತ್ತ ಜನಾಂಗವೊಂದು ಬ್ರಿಟೀಷ್ ಸರ್ಕಾರ ಜಾರಿಗೆ ತಂದ ಉಪ್ಪು ನಿಷೇಧ ಕಾಯ್ದೆಯಿಂದ ತನ್ನ ಮೂಲ ವೃತ್ತಿಯಿಂದ ವಂಚಿತವಾಗಿ ಬೇರೆ ಬೇರೆ ವೃತ್ತಿಗಳಿಗೆ ಸ್ಥಿತ್ಯಂತರಗೊಳ್ಳಬೇಕಾಯಿತು. ಈ ಹಿನ್ನೆಲೆಯಲ್ಲಿ ಗುಜರಾತಿನ ದಂಡಿ ಮತ್ತು ಕರ್ನಾಟಕದ ಅಂಕೋಲದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹಗಳಲ್ಲಿ ಉಪ್ಪಾರರ ಪಾತ್ರವನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ಬ್ರಿಟೀಷ್ ಸರ್ಕಾರ ಜನಸಾಮಾನ್ಯರ ದೈನಂದಿನ ಬಳಕೆಯಾದ ಉಪ್ಪಿನ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿ ತನ್ನ ಬೊಕ್ಕಸವನ್ನು ತುಂಬಿಕೊಳ್ಳುತ್ತಿತ್ತು. ಅಲ್ಲದೆ ಉಪ್ಪು ತಯಾರಿಕೆ ಮತ್ತು ಮಾರಾಟದ ಮೇಲೆ ಏಕಸ್ವಾಮ್ಯವನ್ನು ಹೊಂದಿತ್ತು. ಅವರ ಅನುಮತಿ ಇಲ್ಲದೆ ಯಾರೂ ಉಪ್ಪು ತಯಾರಿಸುವುದು ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಲಾಗಿತ್ತು. ಇದು ಬ್ರಿಟೀಷ್ ಸರ್ಕಾರದ ದಮನಕಾರಿ ನೀತಿಯಾಗಿತ್ತು. ಬ್ರಿಟೀಷ್ ಸರ್ಕಾರದ ಈ ನೀತಿಯಿಂದ ಸಮುದ್ರ ತಟದಲ್ಲಿದ್ದ ನಾಗರೀಕರಿಗೆ ಸಮುದ್ರದ ಉಪ್ಪು ಪುಕ್ಕಟೆಯಾಗಿ, ಸುಲಭ ಬೆಲೆಯಲ್ಲಿ ದೊರೆಯುವಂತಿದ್ದರೂ ಅವರು ಅದನ್ನು ಸರ್ಕಾರದಿಂದ ಹೆಚ್ಚಿನ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳಬೇಕಾಗಿತ್ತು ಮತ್ತು ಹೆಚ್ಚಿನ ತೆರಿಗೆಯು ಈ ಅತ್ಯಾವಶ್ಯಕ ಪದಾರ್ಥವನ್ನು ಜನಸಾಮಾನ್ಯರಿಗೆ ದುಬಾರಿಯಾಗಿಸಿತ್ತು. ಬ್ರಿಟೀಷ್ ಸರ್ಕಾರದ ಈ ನೀತಿ ಎಲ್ಲ ಧರ್ಮ, ವರ್ಗ ಮತ್ತು ಜಾತಿಯ ಜನರನ್ನು ಪ್ರೇರೇಪಿಸಿತ್ತು. ಹಾಗಾಗಿ ಗಾಂಧೀಜಿಯವರು ಈ ಚಳುವಳಿಯಲ್ಲಿ ಎಲ್ಲ ವರ್ಗದ ಜನರು ಭಾಗವಹಿಸಲು ಪ್ರೇರೇಪಿಸುವುದರಲ್ಲಿ ಯಶಸ್ವಿಯಾದರು.

ಬ್ರಿಟೀಷ್ ಸರ್ಕಾರದ ಈ ನೀತಿಯನ್ನು ವಿರೋಧಿಸಿ ಮಹಾತ್ಮ ಗಾಂಧೀಜಿಯವರು ನಡೆಸಿದ ಸತ್ಯಾಗ್ರಹವನ್ನು 'ಉಪ್ಪಿನ ಸತ್ಯಾಗ್ರಹ' ಅಥವ 'ದಂಡಿಯಾತ್ರೆ' ಎನ್ನಲಾಗುತ್ತದೆ. ಬ್ರಿಟೀಷರ ಈ ನೀತಿಯನ್ನು ಪ್ರತಿಭಟಿಸಿ ಮಹಾತ್ಮ ಗಾಂಧಿಯವರು ತಮ್ಮ ಅನುಯಾಯಿಗಳೊಡನೆ ಸಬರಮತಿ ಆಶ್ರಮದಿಂದ ದಾಂಡಿಯವರೆಗಿನ 240 ಮೈಲುಗಳನ್ನು ಕಾಲ್ನಡಿಗೆಯಿಂದ ಕ್ರಮಿಸಿ, ಬ್ರಿಟ್ೀಷ್ ಸರ್ಕಾರ ಜಾರಿಗೆ ತಂದ ಅಧಿಕ ತೆರಿಗೆ ಮತ್ತು ಅನುಮತಿ ಇಲ್ಲದೆ ಯಾರೂ ಉಪ್ಪನ್ನು ತಯಾರು ಮಾಡುವಂತಿಲ್ಲ ಎನ್ನುವ ನೀತಿಗೆ ವಿರುದ್ಧವಾಗಿ ಉಪ್ಪನ್ನು ತಯಾರಿಸಿದರು. ಇದೇ ಇತಿಹಾಸದಲ್ಲಿ 'ಉಪ್ಪಿನ ಸತ್ಯಾಗ್ರಹ' ಎಂದು ಪ್ರಸಿದ್ದವಾಗಿದೆ.

ಬ್ರಿಟೀಷ್ ಸರ್ಕಾರದ ಈ ನೀತಿಗೆ ವಿರುದ್ಧವಾಗಿ ಗಾಂಧೀಜಿಯವರು ಕೈಗೊಂಡ ಈ ನಡಿಗೆಯು 1930 ಮಾರ್ಚ್ 12ರಂದು ಪ್ರಾರಂಭವಾಗಿ ಏಪ್ರಿಲ್ 6ರಂದು ದಾಂಡಿ ತಲುಪಿತು. ಸಬರಮತಿಯಿಂದ ಪ್ರಾರಂಭವಾದ ಈ ಯಾತ್ರೆಯು 23 ದಿನಗಳಲ್ಲಿ 4 ಜಿಲ್ಲೆ ಮತ್ತು 48 ಹಳ್ಳಿಗಳ ಮೂಲಕ ಹಾಯ್ದು, 384

ಕಿಲೋ ಮೀಟರ್‌ಗಳ ದೂರದ ಕಡಲ ತೀರದ ದಾಂಡಿಯನ್ನು ತಲುಪಿತು. ಸಾವಿರಾರು ಮಂದಿ ಪಾಲ್ಗೊಂಡ ಈ ನಡಿಗೆಯು ಭಾರೀ ಸಾರ್ವಜನಿಕ ಬೆಂಬಲವನ್ನು ಗಳಿಸಿತು. ದಂಡಿಯನ್ನು ತಲುಪುವ ಹೊತ್ತಿಗೆ ಇಡೀ ರಾಷ್ಟ್ರವನ್ನು ಗಾಂಧಿಯವರು ತಮ್ಮೊಡನೆ ತೆಗೆದುಕೊಂಡು ಹೋಗಿದ್ದರು. ಅಷ್ಟೇ ಅಲ್ಲ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉಪ್ಪಿನ ಸತ್ಯಾಗ್ರಹವು ಒಂದು ಮಹತ್ವಪೂರ್ಣ ಘಟನೆಯಾಗಿದೆ.

ಗಾಂಧಿಯವರ ಈ ಸತ್ಯಾಗ್ರಹವು ಬ್ರಿಟೀಷರ ವಿರುದ್ಧ ಜನರಲ್ಲಿ ಆತ್ಮವಿಶ್ವಾಸ ತುಂಬುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಹಸ್ರಾರು ಜನರು ಗಾಂಧಿಯವರಿಂದ ಪ್ರೇರೇಪಿತರಾಗಿ ಸ್ವತಃ ಉಪ್ಪನ್ನು ತಯಾರಿಸಿದರು. ಮತ್ತು ಕಾನೂನು ಬಾಹಿರವಾಗಿ ಉಪ್ಪನ್ನು ಕೊಂಡರು. ಕಾನೂನುಬಾಹಿರವಾಗಿ ಉಪ್ಪನ್ನು ಮಾರಿದ ಮತ್ತು ಕೊಂಡ ಸಹಸ್ರಾರು ಜನರನ್ನು ಬ್ರಟೀಷ್ ಸರ್ಕಾರ ಬಂಧಿಸಿತು. ಈ ಸತ್ಯಾಗ್ರಹವು ದೇಶದಾದ್ಯಂತ ಇದೇ ರೀತಿಯ ಚಳುವಳಿಗಳಿಗೆ ಕಾರಣವಾಯಿತು. ತಮಿಳುನಾಡು, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ಚಳುವಳಿಗಳು ನಡೆದವು.

ಗಾಂಧೀಜಿಯವರ ಈ ಚಳುವಳಿಯು ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆ ನೀಡಿತು. ಬ್ರಿಟೀಷ್ ಸರ್ಕಾರದ ನಿಯಮದಿಂದ ಅಸಮಾಧಾನಗೊಂಡ ನಾಯಕರು ಈ ಸಮಸ್ಯೆಯನ್ನು ಹೋರಾಟದ ಮೂಲಕವೇ ಇತ್ಯರ್ಥ ಮಾಡಬೇಕೆಂದು ನಿರ್ಧರಿಸಿದರು. ಆ ನಿರ್ಧಾರದಂತೆ 1930 ಫೆಬ್ರವರಿ 20ರಂದು ಬಳ್ಳಾರಿಯಲ್ಲಿ ಸಭೆ ಸೇರಿ ಕರ್ನಾಟಕದ ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಆ ತೀರ್ಮಾನದಂತೆ 1930 ಏಪ್ರಿಲ್ 13ರಂದು ಕಾಂಗ್ರೆಸ್ ನಾಯಕ ಎಂ. ಪಿ. ನಾಡಕರ್ಣಿ ಅವರ ನೇತೃತ್ವದಲ್ಲಿ ಉಪ್ಪನ್ನು ತಯಾರಿಸಿ ಹರಾಜು ಹಾಕಲಾಯಿತು. ಅಂಕೋಲದಲ್ಲಿ ಆರಂಭವಾದ ಈ ಸತ್ಯಾಗ್ರಹವು ದಕ್ಷಿಣ ಭಾರತದ ಅತಿದೊಡ್ಡ ಚಳುವಳಿಯಾಗಿ ರೂಪುಗೊಂಡಿತು.

ದಂಡಿಯಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಕರ್ನಾಟಕದ ಪ್ರಮುಖ ವ್ಯಕ್ತಿ ಮೈಲಾರ ಮಹದೇವಪ್ಪನವರು ಭಾಗವಹಿಸಿದ್ದರು. ಈ ಯಾತ್ರೆಗೆ ಪೂರಕವಾಗಿ ಕರ್ನಾಟಕದಲ್ಲಿ ಎಂ.ಪಿ.ನಾಡಕರ್ಣಿ, ಸದಾಶಿವರಾವ್, ಗಂಗಾಧರರಾವ್, ಶಾಮರಾವ್ ಶೇಣ್ವಿ, ದೇಶಪಾಂಡೆ, ಸ್ವಾಮಿ ನಿತ್ಯಾನಂದ, ವಂದಿಗೆ ಹಮ್ಮಣ್ಣನಾಯಕ, ಶೆಟಗೇರಿ ಜೋಗಿನಾಯಕ, ಬಾಸ್ಕೋಡ ಬೊಮ್ಮಯ್ಯ, ಆರ್ ಆರ್ ದಿವಾಕರ್, ಬಿ ಎಸ್ ನಾಯಕ್, ಎ.ಎಸ್. ಹರ್ಡೀಕರ್, ಕಡಪ ರಾಘವೇಂದ್ರರಾವ್, ಹನುಮಂತ ರಾವ್ ಕೌಜಲಗಿ ಮುಂತಾದವರ ನೇತೃತ್ವದಲ್ಲಿ ಕರ್ನಾಟಕದ ಬಾರ್ಡೋಲಿ ಎಂದು ಕರೆಯಲ್ಪಡುವ ಅಂಕೋಲದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದ ಈ ಸತ್ಯಾಗ್ರಹವು ದೇಶದ ಗಮನವನ್ನು ಸೆಳೆಯಿತು.

ಮಂಗಳೂರು, ಉಡುಪಿ, ಕುಂದಾಪುರ, ಬಸನಾಳ ಮುಂತಾದ 30 ಕೇಂದ್ರಗಳಲ್ಲಿ ನಡೆದ ಈ ಸತ್ಯಾಗ್ರಹವು ವಂದಿಗೆ, ಶಟಗೇರಿ, ಹೊಸ್ಕೇರಿ, ಸೂರ್ವೆ, ಬಾವಿಕೇರಿ, ಹಿಚ್ಕಡ, ಕಣಗೀಲ ಮುಂತಾದ ಹಳ್ಳಿಗಳಿಗೂ ವಿಸ್ತರಿಸಿತು. ಸುತ್ತಲ ಗ್ರಾಮಗಳ ನೂರಾರು ಹೋರಾಟಗಾರರು ಪೋಲೀಸರ ಲಾಟಿಗೆ ಎದೆಯೊಡ್ಡಿ ನಿಂತರು. ಅಷ್ಟೇ ಅಲ್ಲ ಉತ್ತರ ಕನ್ನಡ ಜಿಲ್ಲೆಯ ಸಾಣೆಕಟ್ಟೆಯ ಸರಕಾರಿ ಉಪ್ಪಿನ ಮಳಿಗೆಗಳ ಮೇಲೆ ದಾಳಿ ಮಾಡಿ ಉಪ್ಪನ್ನು ಬೇರೆ ಕಡೆಗೆ ಸಾಗಿಸಿದರು. ಸ್ವತಹ ಉಪ್ಪನ್ನು ತಯಾರಿಸಿ ಉಪ್ಪಿನ ಸಂತೆಗಳನ್ನು ನಡೆಸಿದರು. ಅನೇಕರು ಬಂಧನಕ್ಕೊಳಗಾಗದರು. ಜನರ ನಿರಂತರ ಹೋರಾಟದಿಂದ

ಯಶಸ್ವಿಯಾದ ಈ ಸತ್ಯಾಗ್ರಹವು ಅಂಕೋಲದ ಕೀರ್ತಿಯನ್ನು ದೇಶದಾದ್ಯಂತ ಹರಡಿತು. ಈ ಚಳುವಳಿಗಳ ಹಿನ್ನೆಲೆಯಲ್ಲಿ ಉಪ್ಪಿನ ತಯಾರಕರಾದ ಉಪ್ಪಾರರು ಅನುಭವಿಸಿದ ಸಂಕಷ್ಟ ಮತ್ತು ಈ ಚಳುವಳಿಗಳಲ್ಲಿ ಉಪ್ಪಾರರ ಪಾತ್ರವನ್ನು ಗುರುತಿಸುವುದು ಈ ಲೇಖನದ ಆಶಯವಾಗಿದೆ.

ಉಪ್ಪಾರರು ತಯಾರಿಸುತ್ತಿದ್ದ ಉಪ್ಪು ಬ್ರಿಟೀಷರ ಕಣ್ಣನ್ನು ಕುಕ್ಕಿದುದರ ಪರಿಣಾಮವಾಗಿ ಕ್ರಿ. ಶ. 1805ರಲ್ಲಿ ಬ್ರಿಟೀಷ್ ಸರ್ಕಾರ ಕಾನೂನಿನ ಮೂಲಕ ಉಪ್ಪು ತಯಾರಿಕೆಯನ್ನು ನಿಷೇಧಿಸಿತು. 1873ರಲ್ಲಿ G.Thornhill ಎಂಬ ಕಂದಾಯ ಮಂಡಳಿಯ ಸದಸ್ಯ ceded (ಸೀಡೆಡ್) ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಉಪ್ಪಾರರ ಉಪ್ಪಿನ ಮಾಳೆಗಳಿಂದ ತಯಾರಾಗುವ ಉಪ್ಪಿನಿಂದಾಗಿ ಕಂಪನಿಯ ಸರ್ಕಾರಕ್ಕೆ ವಾರ್ಷಿಕ 8 ರಿಂದ 10 ಲಕ್ಷ ರೂಪಾಯಿ ಹಾನಿಯಾಗುತ್ತದೆಂದು ವರದಿ ಸಲ್ಲಿಸಿ ನಿಧಾನವಾಗಿ ಉಪ್ಪಾರರು ಉಪ್ಪು ತಯಾರಿಸುವುದನ್ನು ಪ್ರತಿಬಂಧಿಸಬೇಕೆಂದು ತಿಳಿಸಿದನು.

ಈತನ ವರದಿಯ ಪ್ರಕಾರ 1889ರಲ್ಲಿ ಮದ್ರಾಸ್ ಉಪ್ಪು ಕಾಯ್ದೆ ಜಾರಿಗೆ ಬಂದಿತು. ಈ ಕಾಯ್ದೆಯ ಪ್ರಕಾರ ಉಪ್ಪಾರರು ಉಪ್ಪು ತಯಾರಿಸಲು ಸರ್ಕಾರದ ಅನುಮತಿಯನ್ನು ಪಡೆಯಬೇಕಾಯಿತು. ಅನುಮತಿ ಇಲ್ಲದೆ ಅಥವ ಪಡೆದ ಅನುಮತಿಗಿಂತ ಹೆಚ್ಚು ಉಪ್ಪು ತಯಾರಿಸಿದರೆ ದಂಡ ಮತ್ತು ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ಈ ಕಾಯ್ದೆಯ ಪ್ರಕಾರ 'ಮಣ್ಣುಪ್ಪು' ಸಂಗ್ರಹಿಸುವುದು, 'ಸೋರುಪ್ಪು' ಕೊಳ್ಳುವುದು, ಮಾರುವುದು, ಪರಿಷ್ಕರಿಸುವುದರ ಮೇಲೆ ನಿರ್ಬಂಧ ವಿಧಿಸಲಾಯಿತು.

ಬ್ರಿಟೀಷ್ ಸರ್ಕಾರ ಜಾರಿಗೆ ತಂದ ಈ ಕಾಯ್ದೆಯ ಜಾರಿಯಿಂದಾಗಿ ಉಪ್ಪಿನ ಮಾಳೆಗಳನ್ನು ಹೊಂದಿದ್ದ ಉಪ್ಪಾರರಿಗೆ ಅಲ್ಪ ಸ್ವಲ್ಪ ಪರಿಹಾರ ನೀಡಿ ಮಾಳೆಗಳನ್ನೆಲ್ಲ ನಾಶ ಮಾಡಬೇಕು ಎನ್ನುವ ಆಜ್ಞೆ ಹೊರಡಿಸಲಾಯಿತು. ಬ್ರಿಟೀಷ್ ಆಡಳಿತ ಇಂತಹ ಕರಾಳ ಶಾಸನಗಳ ಮೂಲಕ ಭಾರತದ ದುಡಿಮೆಗಾರ ಕುಲಗಳು ತಮ್ಮ "ಪರಂಪರಾಗತ ವೃತ್ತಿಗಳಿಂದ ಸೀಮಿತ ಅವಕಾಶಗಳಲ್ಲಿಯೂ ಸಾಮಾಜಿಕ ಸ್ಥಾನಮಾನವಲ್ಲದೆ ಆರ್ಥಿಕ ಸ್ಥಿತಿಗತಿಯಿಂದ ಅಲ್ಪ ಮಟ್ಟಿಗೆ ನೆಮ್ಮದಿಯಿಂದ ಇದ್ದ ಶ್ರಮ ಜೀವಿಗಳನ್ನು ಅವರ ದುಡಿಮೆಯಿಂದ ಪ್ರತ್ಯೇಕಗೊಳಿಸುವ ಮೂಲಕ ಅನಾಥರನ್ನಾಗಿ ಮಾಡಿತು". ಈ ಹಿನ್ನೆಲೆಯಲ್ಲಿ ದಂಡಿ ಮತ್ತು ಅಂಕೋಲದಲ್ಲಿ ನಡೆದ ಉಪ್ಪಿನ ಚಳುವಳಿಗಳಲ್ಲಿ ಉಪ್ಪಾರರ ಪಾತ್ರವನ್ನು ಪರಿಭಾವಿಸಲಾಗಿದೆ.

ಬ್ರಿಟೀಷ್ ಸರ್ಕಾರ ಹಿಂದೆ ಜಾರಿಗೆ ತಂದ ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ವಿರುದ್ಧ ಉಗ್ರವಾಗಿ ಪ್ರತಿಭಟಿಸಿದವರು ಹಲಗಲಿಯ ಬೇಡರೇ ಹೊರತು ಬೇರಾರೂ ಅಲ್ಲ. ಏಕೆಂದರೆ ಬೇಟೆಯೇ ಬೇಡರ ಜೀವನದ ಮಾರ್ಗವಾಗಿತ್ತು. ಬೇಟೆಗೆ ಅವಶ್ಯಕವಾಗಿದ್ದ ಶಸ್ತ್ರಾಸ್ತ್ರಗಳು ಅವರಿಗೆ ಅನಿವಾರ್ಯವಾಗಿದ್ದವು. ಅಂತಹ ಜೀವನಾಶ್ಯಕ ಶಸ್ತ್ರಗಳನ್ನು ಬ್ರಿಟೀಷ್ ಸರ್ಕಾರಕ್ಕೆ ಒಪ್ಪಿಸ ಬೇಕೆಂಬ ಕಂಪನಿ ಸರ್ಕಾರದ ಆದೇಶ ಬೇಡರ ಜೀವನೋಪಾಯಕ್ಕೆ ಸಂಚಕಾರವಾಗಿತ್ತು. ಆದ್ದರಿಂದ ಈ ಕಾಯ್ದೆಯನ್ನು ಬೇಡರು ಉಗ್ರವಾಗಿ ಪ್ರತಿಭಟಿಸಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಆದರೆ ಮುಂದಿನದು ಮಾತ್ರ ರಕ್ತಸಿಕ್ತ ಅಧ್ಯಾಯವೇ ಸರಿ.

ಹಲಗಲಿಯ ಬೇಡರು ಪ್ರತಿಭಟಿಸಿದಂತೆ ದಂಡಿಯ 'ಸಬರಮತಿ' ಮತ್ತು ಸುತ್ತಲಿನ ಸಮುದ್ರ ತೀರದಲ್ಲಿದ್ದ ಉಪ್ಪು ತಯಾರಿಸುವ ಇವರೆಲ್ಲರೂ ಗಾಂಧಿಯ ಈ ಹೋರಾಟದಲ್ಲಿ ತುಂಬಾ ಸಕ್ರಿಯವಾಗಿ ಭಾಗವಹಿಸಿರಲೇಬೇಕು. ಏಕೆಂದರೆ ಉಪ್ಪಾರಿಕೆಯನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದ ಉಪ್ಪಾರ

ಸಮುದಾಯಗಳು ಪ್ರತಿಭಟಿಸಿದಿಲು ಸಾಧ್ಯವೇ ಇಲ್ಲ. ಬೇಡರಿಗೆ ಶಸ್ತ್ರಾಸ್ತ್ರಗಳು ಹೇಗೆ ಜೀವನಾವಶ್ಯಕವಾಗಿದ್ದವೋ ಹಾಗೆಯೆ ಉಪ್ಪಾರರಿಗೆ 'ಉಪ್ಪು' ಜೀವನಾವಶ್ಯಕ ವಸ್ತುವಾಗಿತ್ತು. ಅಷ್ಟು ಮಾತ್ರವಲ್ಲ 'ಉಪ್ಪು' ಅವರಿಗೆ ಲಕ್ಷ್ಮಿಯ ಸ್ವರೂಪವಾಗಿತ್ತು, ಅವರ ಸಂಸ್ಕೃತಿಯ ಮತ್ತು ಪರಂಪರೆಯ ಭಾಗವಾಗಿತ್ತು. ಇಂತಹ ಉಪ್ಪಿನ ತಯಾರಿಕೆಯನ್ನು ನಿಷೇಧಿಸಿದಾಗ ಪ್ರತಿಭಟಿಸದಿರಲು ಸಾಧ್ಯವೇ?

ಆದರೆ ವಸಾಹತುಶಾಹಿ ಮತ್ತು ಬಂಡವಾಳಶಾಹಿ ಪೋಷಿತ ಹಾಗೂ ಪ್ರಭುತ್ವ ಕೇಂದ್ರಿತವಾದ ಮೇಲ್ವರ್ಗದ ವಿದ್ವತ್ ವಲಯವು ಕಟ್ಟಿಕೊಟ್ಟ ಚರಿತ್ರೆಯಲ್ಲಿ ಜನಸಾಮಾನ್ಯರಾದ ಉಪ್ಪಾರರ ಪಾತ್ರ ಇತಿಹಾಸದ ಪುಟಗಳಲ್ಲಿ ದಾಖಲಾಗದೇ ಇರುವುದು ಆಶ್ಚರ್ಯವೇನಲ್ಲ. ಅಂದ ಮಾತ್ರಕ್ಕೆ ಈ ಚಳುವಳಿಗಳಲ್ಲಿ ಉಪ್ಪಾರರು ಭಾಗವಹಿಸಿಲ್ಲ ಎಂದು ಹೇಳಲಾಗುತ್ತದೆಯೇ? ಖಂಡಿತ ಇಲ್ಲ. ಭಾರತೀಯರ ಸ್ವಾಭಿಮಾನದ ಸಂಕೇತವಾದ ಈ ಸತ್ಯಾಗ್ರಹದಲ್ಲಿ ಉಪ್ಪಾರಿಕೆಯನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದ ಸಮುದಾಯಗಳ ಪಾತ್ರ ಗಣನೀಯವಾಗಿದೆ. ಆದರೆ ಲಿಖಿತ ಪರಂಪರೆಯಲ್ಲಿ ಎಲ್ಲಿಯೂ ಸ್ಥಾನ ಪಡೆದುಕೊಂಡಿಲ್ಲದಿರುವುದು ಚರಿತ್ರೆ ದುಡಿಮೆಗಾರರನ್ನು ಕಡೆಗಣಿಸಿರುವುದಕ್ಕೆ ಸಾಕ್ಷಿಯಾಗಿದೆ. ಕೇವಲ ದಾಖಲೆಗಳಿಲ್ಲವೆಂದ ಮಾತ್ರಕ್ಕೆ ವೃತ್ತಿ ಮೂಲಿಗರಾದವರ ಪಾತ್ರವನ್ನು ನಿರಾಕರಿಸಲಾದೀತೆ?

ಇತಿಹಾಸವನ್ನು ಪರಿಭಾವಿಸುವ ನಮ್ಮ ದೃಷ್ಟಿಕೋನ ಈಗ ಬದಲಾಗಿದೆ. ಇತಿಹಾಸವೆಂದರೆ ಕೇವಲ ಬರೀ ರಾಜಕೀಯ ಚರಿತ್ರೆಯಷ್ಟೇ ಅಲ್ಲ. ವಾಸ್ತವವಾಗಿ ಈ ನಾಡಿನ ಇತಿಹಾಸವನ್ನು ಕಟ್ಟಿದವರು, ಸಂಸ್ಕೃತಿಯನ್ನು ರೂಪಿಸಿದವರು ಲಿಖಿತ ಪರಂಪರೆಯಿಲ್ಲದ ದುಡಿಮೆಗಾರರಾದ ಜನಸಾಮಾನ್ಯರು ಮತ್ತು ಸಮಾಜದ ಅಂಚಿನ ಜನರು. ಆದರೆ ಇದುವರೆಗೂ ನಮ್ಮಲ್ಲಿ ಬರೀ ರಾಜಕೀಯ ಚರಿತ್ರೆಯ ಭಾಗವಾಗಿಯಷ್ಟೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಇತ್ಯಾದಿ ಘಟನೆಗಳು ಚಿತ್ರಿತವಾಗಿರುವುದು ಶೋಚನೀಯ ಸಂಗತಿ. ರಾಜ ಮಹಾರಾಜರುಗಳ, ಅಧಿಕಾರಿಗಳ ವೈಭವದ ಬದುಕಿಗೆ ಕಾರಣರಾದ ಜನಸಾಮಾನ್ಯರ ಬದುಕು ನಮ್ಮ ಇತಿಹಾಸದಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ಈ ಎರಡೂ ಚಳುವಳಿಗಳನ್ನು ಪರಿಭಾವಿಸಲಾಗಿದೆ.

ಸ್ಥಳೀಯ ಉಪ್ಪು ತಯಾರಿಕೆಗಳ ಮೇಲೆ ನಿರ್ಬಂಧ ಏರಿದ ಬ್ರಿಟೀಷ್ ಸರ್ಕಾರ ಹೆಚ್ಚಿನ ಬೇಡಿಕೆಯ ಉಪ್ಪನ್ನು ತಮ್ಮ ದೇಶದಿಂದ ಆಮದು ಮಾಡಿಕೊಂಡಿತು. ಉಪ್ಪಿನ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸುವ ಮೂಲಕ ಹೆಚ್ಚಿನ ರಾಜಾದಾಯವನ್ನು ಪಡೆದು ಬಡ ಜನರ ಸುಲಿಗೆ ಮಾಡಿತು. ಕನ್ನಡ ಕರಾವಳಿಯ ಎಲ್ಲ ಉಪ್ಪಿನ ಕೇಂದ್ರಗಳನ್ನು ಮುಚ್ಚಿಸಿ ಗೋಕರ್ಣದ ಬಳಿಯ ಸಾಣೆಕಟ್ಟೆಯಲ್ಲಿ ಮಾತ್ರ ಒಂದು ಸರ್ಕಾರಿ ಉಪ್ಪಿನ ಆಗರವನ್ನು ಉಳಿಸಿಕೊಳ್ಳುವ ಮೂಲಕ ಶ್ರಮ ಜೀವಿಗಳ ದಮನಕ್ಕೆ ಮುಂದಾಯಿತು. ಬ್ರಿಟೀಷ್ ಸರ್ಕಾರದ ಈ ನಿಯಮ ಭಾರತೀಯರ ಅಸಮಾಧಾನಕ್ಕೆ ಕಾರಣವಾಯಿತು. ಇದರಿಂದ ಪ್ರೇರೇಪಿತರಾದ ಗಾಂಧೀಜಿಯವರು ಹೋರಾಟಕ್ಕೆ ಮುಂದಾದರು.

ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟಕ್ಕೆ 'ಚರಕ' ಹೇಗೆ ಅಸ್ತ್ರವಾಯಿತೋ ಹಾಗೆಯೇ ದಂಡಿಗೆ ಉಪ್ಪು ಮಾಡಲು ಹೋಗುವ ಗಾಂಧಿಯ ಪಯಣವು ಸ್ವಾತಂತ್ರ್ಯ ಹೋರಾಟದ ಯಾತ್ರೆಯಾಯಿತು. ಮಹಾತ್ಮ ಗಾಂಧೀಜಿಯವರು ಕೈಗೊಂಡ ಭಾರತೀಯರ ಸ್ವಾಭಿಮಾನದ ಸಂಕೇತವಾದ ಈ ಸತ್ಯಾಗ್ರಹದಲ್ಲಿ

"ಉಪ್ಪಾರಿಕೆ"ಯನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದ ಗುಜರಾತಿನ Kadiya, Agera, Chunar, ಮತ್ತು Beldar ಸಮುದಾಯಗಳ ಪಾತ್ರ ಗಣನೀಯವಾಗಿದೆ. ಆದರೆ ಲಿಖಿತ ಪರಂಪರೆಯಲ್ಲಿ ಎಲ್ಲಿಯೂ ಸ್ಥಾನ ಪಡೆದುಕೊಂಡಿಲ್ಲದಿರುವುದು ಚರಿತ್ರೆ ದುಡಿಮೆಗಾರರನ್ನು ಕಡೆಗಣಿಸಿರುವುದಕ್ಕೆ ಸಾಕ್ಷಿಯಾಗಿದೆ. ಇಂತಹ ಅನೇಕ ಹೋರಾಟಗಳಲ್ಲಿ ಭಾಗಿಗಳಾಗಿದ್ದು ತಮ್ಮ ಆಸ್ತಿ, ಪಾಸ್ತಿ, ಪ್ರಾಣಗಳನ್ನು ಕಳೆದುಕೊಂಡ ಸಮುದಾಯಗಳ ಹೋರಾಟಕ್ಕೆ ಎಲ್ಲಿಂದ ದಾಖಲೆಗಳನ್ನು ತರುವುದು? ಕೇವಲ ದಾಖಲೆಗಳಿಲ್ಲವೆಂದ ಮಾತ್ರಕ್ಕೆ ವೃತ್ತಿ ಮೂಲಿಗರಾದದವರ ಪಾತ್ರವನ್ನು ನಿರಾಕರಿಸಲಾದೀತೇ?.

ಬ್ರಿಟೀಷರಿಂದ ಬಂಧನಕ್ಕೊಳಗಾದವರಲ್ಲಿ ಉಪ್ಪು ತಯಾರಿಸುವುದನ್ನೇ ಮೂಲ ಕಸುಬಾಗಿಸಿಕೊಂಡಿದ್ದ Kadiya, Agera, chunar, Beldar, Noonagar, loniya, Lonar, Niniya, Uppara, Sagara, Memar, Goundi, Koosa, Uppaliga shetty, Uppalian, Naicker, Alavan, Padh, Padti, Upparam ಮುಂತಾದ ಹೆಸರುಗಳಿಂದ ನಿರ್ದೇಷಿಸಲ್ಪಡುತ್ತಿದ್ದ ಉಪ್ಪಾರರೇ ಹೆಚ್ಚಿನವರೆಂಬುದು ನಿಸ್ಸಂದೇಹವಾಗಿದೆ. ಏಕೆಂದರೆ ಒಂದು ಸಮುದಾಯದ ಪಾರಂಪರಿಕವಾದ ಕಸುಬನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಕೊಂಡಾಗ ಯಾರು ತಾನೇ ಅದನ್ನು ಪ್ರತಿಭಟಿಸದೇ ಇರಲು ಸಾಧ್ಯ! 'ಉಪ್ಪು' ಇವರ ವೃತ್ತಿಯಾಗಿದ್ದಂತೆ, ಇವರ ಅನ್ನದ ಪ್ರಶ್ನೆಯೂ ಆಗಿತ್ತು. ಅನ್ನದ ಮೂಲವನ್ನೇ ಕಸಿದುಕೊಂಡಾಗ ಪ್ರತಿಭಟಿಸದಿರಲು ಸಾಧ್ಯವೇ? ಆದರೆ ಇವರ ಪ್ರತಿಭಟನೆಯನ್ನು ಹತ್ತಿಕುವುದು ಬಲಾಢ್ಯವಾದ ವಸಾಹತುಶಾಹಿಗೆ ಕಷ್ಟವೇನೂ ಆಗಿರಲಿಲ್ಲ. ಅನಾಯಾಸವಾಗಿ ಇವರ ಹೋರಾಟವನ್ನು ನಿಯಂತ್ರಿಸಿತು.

ಕಂಪನಿ ಸರ್ಕಾರ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿತಾದರೂ ಸತ್ಯಾಗ್ರಹಿಗಳ ಉತ್ಸಾಹ ಕುಗ್ಗಲಿಲ್ಲ. ಅಷ್ಟೇ ಅಲ್ಲ ಮುಂದೆ ಚಳುವಳಿಯು ಸುಮಾರು ನಲವತ್ತೈದು ದಿನಗಳ ಕಾಲ ಇಡೀ ನಾಡಿನಾದ್ಯಂತ ಮುಂದುವರೆಯಿತು. ವಿದ್ಯಾರ್ಥಿಗಳೂ ಸಹ ಈ ಚಳುವಳಿಯಲ್ಲಿ ಭಾಗವಹಿಸಿ ಉಪ್ಪನ್ನು ತಯಾರಿಸಿ ಮನೆ ಮನೆಗೆ ಹಂಚಿದರು. ಕಾಯಿದೆ ಭಂಗದ ಕಾವು ಹಳ್ಳಿ ಹಳ್ಳಿಗಳನ್ನೂ ಸಹ ವ್ಯಾಪಿಸಿಕೊಂಡಿತು. ಹಳ್ಳಿಯ ಸಾವಿರಾರು ಜನ ಸ್ತ್ರೀ ಪುರುಷರು ತಮ್ಮ ತಮ್ಮ ಹಳ್ಳಿಗಳಲ್ಲಿ ಉಪ್ಪು ಮಣ್ಣನ್ನು ತಂದು ಉಪ್ಪು ತಯಾರಿಸಿ ಕಾಯಿದೆ ಭಂಗಗೊಳಿಸಿದರು.

ಸರ್ಕಾರ ಚಳುವಳಿಯನ್ನು ಹತ್ತಿಕ್ಕಲು ಶತ ಪ್ರಯತ್ನ ಪಟ್ಟರೂ ಜನ ಉಪ್ಪು ಮಾಡುವುದನ್ನು ಬಿಡಲಿಲ್ಲ. ಹಳ್ಳಿಗರು ತಮಗೆ ವರ್ಷಕ್ಕೆ ಬೇಕಾಗುವಷ್ಟು ಉಪ್ಪುಮಾಡಿ ಸಂಗ್ರಹಿಸಿಕೊಂಡರು. ಕರ್ನಾಟಕದ ಪ್ರತೀ ಊರುಗಳಲ್ಲೂ ನಿತ್ಯವೂ ಉಪ್ಪಿನ ಕಾಯಿದೆ ಭಂಗ ನಡೆಯಿತು. ಗಾಂಧಿ ದಂಡಿಯಲ್ಲಿ ಉಪ್ಪಿನ ಕಾಯಿದೆ ಭಂಗ ಮಾಡಿದಂದಿನಿಂದ ಇಡೀ ಭಾರತದ ಹಳ್ಳಿ ಹಳ್ಳಿಗಳಲ್ಲಿ ವಿಸ್ಮಯಕಾರಿಯಾದ ಜಾಗೃತಿ ಉಂಟಾಯಿತು. ಪರಂಗಿ ಸರ್ಕಾರ ಬರೀ ಮುಂದಾಳುಗಳನ್ನಷ್ಟೇ ಬಂಧಿಸಿದರೂ ಜೈಲಿನಲ್ಲಿ ಸ್ಥಳವಿಲ್ಲದಂತಾಯಿತು. ಈ ಚಳುವಳಿಯು ಸಾರ್ವತ್ರಿಕವಾಗಿ ಕರಾವಳಿ ಪ್ರದೇಶವನ್ನು ವ್ಯಾಪಿಸಿತು. ಚಳುವಳಿಯ ಯಶಸ್ಸಿನಿಂದ ಪ್ರಭಾವಿತರಾದ ಸತ್ಯಾಗ್ರಹಿಗಳು ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಅನೇಕ ಆಂದೋಲನಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಿದರು.

ಕರ್ನಾಟಕದಲ್ಲಿ ನಡೆದ ಈ ಸತ್ಯಾಗ್ರಹಕ್ಕೆ ಅಂಕೋಲ ಒಂದು ನೆಲೆಯನ್ನು ಒದಗಿಸಿದರೂ ಇದು ಇಡೀ ಕರ್ನಾಟಕದ ಪರವಾಗಿ ನಡೆದ ಸತ್ಯಾಗ್ರಹವಾಗಿದೆ. ಚಳುವಳಿಯು ಜಿಲ್ಲೆಯ ಅಂಕೋಲ, ಕುಮುಟಾ, ಗೋಕರ್ಣ, ಕಾರವಾರ, ಉಡುಪಿ, ಸಾಣೆಕಟ್ಟೆ ಮುಂತಾದ ಉಪ್ಪು ತಯಾರಿಕಾ ಕೇಂದ್ರಗಳಿಗೆ ಮಾತ್ರ ಸೀಮಿತವಾಗದೆ ಹಳ್ಳಿ ಹಳ್ಳಿಗಳನ್ನೂ ವ್ಯಾಪಿಸಿತು. ಚಳುವಳಿಯ ನೇತೃತ್ವವನ್ನು ವಹಿಸಿಕೊಂಡಿದ್ದ ನಾಯಕರ ಕರೆಗೆ ಓಗೊಟ್ಟ ಜನಸಾಮಾನ್ಯರು ಜಾತಿ ಧರ್ಮಾತೀತವಾಗಿ ಚಳುವಳಿಯಲ್ಲಿ ಬಂದು ಭಾಗವಹಿಸಿದರು. ಅದರಲ್ಲೂ ವಿಶೇಷವಾಗಿ ಕರಾವಳಿ ಭಾಗದಲ್ಲಿ ಉಪ್ಪು ಮಾಡುವುದನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದ ಅಗೇರಾ (Agera) ಕೂಸಾ (Koosa) (Synonymous names of uppara) ಮುಂತಾದ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಚಳುವಳಿಯ ಯಶಸ್ಸಿಗೆ ಕಾರಣೀಭೂತರಾಗಿರುವುದು ಪ್ರಶಂಸನೀಯವಾದುದು.

ಕಂಪನಿ ಸರ್ಕಾರ ಚಳುವಳಿಯನ್ನು ಹತ್ತಿಕ್ಕಲು ಹರ ಸಾಹಸ ಪಡುತ್ತಿರುವ ಸಂದರ್ಭದಲ್ಲಿ, ಇತ್ತ ಬಯಲುನಾಡಿನ ಉಪ್ಪಾರರು ಕೂಡಾ ತಮ್ಮ ಮಾಳೆಗಳಲ್ಲಿ ಉಪ್ಪನ್ನು ಮಾಡುವ ಮೂಲಕ ಕಾಯಿದೆ ಭಂಗಗೊಳಿಸಿದ್ದಾರೆ. ಆದರೆ ಚರಿತ್ರೆಯಲ್ಲಿ ಕೇವಲ 'ದಂಡಿ' 'ಬಾರ್ಡೋಲಿ' ಮತ್ತು ಕರ್ನಾಟಕದ 'ಅಂಕೋಲ'ದಲ್ಲಿ ನಡೆದ ಚಳುವಳಿಗಳು ಮತ್ತು ಚಳುವಳಿಯ ಮಂಚೂಣಿಯ ನಾಯಕರ ಹೆಸರುಗಳು ಮಾತ್ರ ಇತಿಹಾಸದಲ್ಲಿ ಸ್ಥಾನವನ್ನು ಪಡೆದುಕೊಂಡಿವೆ.

ಆದರಲ್ಲೂ ಈ ಚಳುವಳಿಯಲ್ಲಿ ಉಪ್ಪು ಮಾಡುವುದನ್ನೇ ತಮ್ಮ ವೃತ್ತಿಯನ್ನಾಗಿಸಿ ಕೊಂಡಿದ್ದ Kadiya, Agera, chunar, Beldar, Noonagar, loniya, Lonar, Niniya, Uppara, Sagara, Memar, Goundi, Koosa, Uppaliga shetty, Uppalian, Naicker, Alavan, Padh, Padti, Upparam ಮುಂತಾದ ಸಮುದಾಯಗಳ ಪಾತ್ರ ಬಹುದೊಡ್ಡ ಪ್ರಮಾಣದಲ್ಲಿ ಇತ್ತೆಂಬುದರಲ್ಲಿ ಸಂಶಯವಿಲ್ಲ. ತಮ್ಮ ಮೂಲವೃತ್ತಿಗೆ ಧಕ್ಕೆ ಬಂದಾಗ ಅದನ್ನು ಸಹಿಸಿಕೊಂಡು ಸುಮ್ಮನಿರುವುದು ಸಾಧ್ಯವಾಗದ ಮಾತು. ಆದರೆ ಚರಿತ್ರೆಯ ಪುಟಗಳಲ್ಲಿ ಇವರ ಪ್ರತಿಭಟನೆ ಸ್ಥಾನವನ್ನು ಪಡೆದಿರುವುದಿಲ್ಲ. ಅಂದ ಮಾತ್ರಕ್ಕೆ ಈ ಚಳುವಳಿಯಲ್ಲಿ ಈ ಸಮುದಾಯಗಳ ಪಾತ್ರವನ್ನು ಅಲ್ಲಗಳೆಯಲಾಗುವುದಿಲ್ಲ.

**ಉಪಸಂಹಾರ**

ಒಟ್ಟಾರೆ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯಾದ ಉಪ್ಪು ಮತ್ತು ಈ ವೃತ್ತಿಯನ್ನೇ ಪರಂಪರಾಗತವಾಗಿ ನಿರ್ವಹಿಸಿಕೊಂಡು ಬರುತ್ತಿದ್ದವರ ಪಾತ್ರ ಬಹುದೊಡ್ಡ ಪ್ರಮಾಣದಲ್ಲಿ ಇತ್ತೆಂಬುದನ್ನು ಗಮನಿಸಿದರೆ ಚರಿತ್ರೆಯಲ್ಲಿ ಉಪ್ಪು ಮತ್ತು ಉಪ್ಪನ್ನು ಮಾಡುವ ಸಮುದಾಯಗಳ ಕೊಡುಗೆ ಎಷ್ಟಿತ್ತೆಂಬುದು ಮನವರಿಕೆಯಾಗುತ್ತದೆ. ಜಾತಿ ಧರ್ಮಾತೀತವಾಗಿ ಸಾಮಾನ್ಯ ಜನರೂ ಕೂಡಾ ಈ ಚಳುವಳಿಯಲ್ಲಿ ಭಾಗವಹಿಸಿ ಚಳುವಳಿಯ ಯಶಸ್ಸಿಗೆ ಕಾರಣಕರ್ತರಾಗಿದ್ದಾರೆ. ಈ ಚಳುವಳಿಯು ಕೇವಲ ಈ ಎರಡು ಪ್ರದೇಶಗಳಿಗೆ ಮಾತ್ರ ಸೀಮಿತವಾಗದೆ ಇಡೀ ದೇಶವನ್ನೇ ವ್ಯಾಪಿಸಿಕೊಂಡಿತ್ತೆಂಬುದರಲ್ಲಿ ಸಂಶಯವಿಲ್ಲ.

**ಪರಾಮರ್ಶನ ಗ್ರಂಥಗಳು**


- ಕರ್ನಾಟಕ ಸಶಸ್ತ್ರ ಬಂಡಾಯ. ವಿಕಿಪೀಡಿಯಾ ಸೋರ್ಸ್.
- ನಾಗರಾಜು. ಎಂ. ಎಚ್. (2003). ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ. ಸ.ಪ.ಪೂ.ಕಾ. ಬಿಳಿಗೆರೆ, ತಿಪಟೂರು ತಾಲೂಕು.
- ರಂಗನಾಥ ದಿವಾಕರ. (2001). ಕರನಿರಾಕರಣೆಯ ವೀರಕಥೆ. ದ್ವಿ. ಮು. ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಹುಬ್ಬಳ್ಳಿ.
- ಸೂರ್ಯನಾಥ. ಯು. ಕಾಮತ್. (ಮು.ಸಂ) (1984) ಕರ್ನಾಟಕ ರಾಜ್ಯ ಗ್ಯಾಜೆಟಿಯರ್. ಭಾ–1. ಕರ್ನಾಟಕ ಸರ್ಕಾರ, ಬೆಂಗಳೂರು.
- ಹಿರೇಮಠ.ಎಸ್.ಎಸ್. ಉಪ್ಪಾರರು. (1998). ತಾಲ್ಲೂಕು ಉಪ್ಪಾರ ನೌಕರರ ಸಂಘ, ಹರಪನಹಳ್ಳಿ.